## ಅಂಗವಿಕಲರಿಗಾಗುವ ಅಪಮಾನ

**ತಾ**ಯಿಗೆ ಮಕ್ಕಳು ಹೊರೆಯಲ್ಲ. ಮಾನಸಿಕ ಅಥವಾ ದೈಹಿಕವಾಗಿ ಬೇರೆಯ ಮಕ್ಕಳಿಗಿಂತ ದುರ್ಬಲವಾಗಿರುವ ತಾನೇ ಹೆತ್ತ ಕಂದಮ್ಮಗಳನ್ನು ತಾಯಿ ಎಂದಿಗೂ ಕಡೆಗಣಿಸುವುದಿಲ್ಲ. ಹಾಗೆಯೇ ಸಮಾಜಕ್ಕೆ ಅದರ ದುರ್ಬಲ ವರ್ಗದವರು, ಅಂಗವಿಕಲರು ಮತ್ತು ಮಾನಸಿಕವಾಗಿ ಹಿಂದುಳಿದವರು ಹೊರೆಯಾಗಬಾರದು. ಒಂದು ಸಮಾಜದ ಗುಣಮಟ್ಟ ಆ ಸಮಾಜದ ಸದಸ್ಯರು ತೋರುವ ಮಾನವೀಯ ಅನುಕಂಪೆ, ಪರಸ್ಪರ ಸಹಾಯ ಮತ್ತು ಸಹಕಾರಗಳ ಮೇಲೆ ಆಧಾರಿತವಾಗಿದೆಯೇ ಹೊರತು, ಆ ಸಮಾಜ ಗಳಿಸಿದ ಭೌತಿಕ ಸಂಪತ್ತಿನ ಮೇಲಲ್ಲ.

ಈ ದೃಷ್ಟಿಯಿಂದ ನಮ್ಮ ದೇಶದಲ್ಲಿರುವ ಲಕ್ಷಾಂತರ ಮಂದಿ ಅಂಗವಿಕಲರ ಸಮಸ್ಯೆಗಳಿಗೆ ಕ್ರಿಯಾತ್ಮಕ ಪರಿಹಾರ ದೊರಕಿಸಿಕೊಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಮ್ಮ ಕಣ್ಣೋ ಮೂಗೋ ಬಾಯಿಯೋ ಊನವೆಂದು, ಸುಂದರವಾಗಿಲ್ಲವೆಂದು ಅದನ್ನು ಕಿತ್ತು ಬಿಸುಡಲಾದೀತೆ ? ಹಾಗೆಯೇ ನಮ್ಮ ಸಮಾಜ-ಪುರುಷನ ಅವಿಭಾಜ್ಯ ಅಂಗಗಳು ನಮ್ಮ ಸಹೋದರರಾದ ಅಂಗವಿಕಲರು ಎಂದು ನಾವು ಎಂದೆಂದೂ ಮರೆಯಬಾರದು.

೨೯ ಮೇ ೨೦೦೫ರ **ವಿಜಯ ಕರ್ನಾಟಕ** ಪತ್ರಿಕೆಯಲ್ಲಿ ಕೆಲವು ಅಂಗವಿಕಲರು ತಾವು ಸಮಾಜದಿಂದ ಹೇಗೆ ನಿರ್ಲಕ್ಷ್ಯಕ್ಕೂ ಅಪಮಾನಕ್ಕೂ ಹಾಗೂ ಅವಹೇಳನಕ್ಕೂ ತುತ್ತಾಗುತ್ತಿದ್ದೇವೆ ಎನ್ನುವುದನ್ನು ಹೃದಯಸ್ಪರ್ಶಿಯಾಗಿ ತೋಡಿಕೊಂಡಿದ್ದಾರೆ. ಅಂಧರಾದ ಕೆ. ಲೋಕೇಶ್ ಜನನಿಬಿಡ ರಸ್ತೆಗಳಲ್ಲಿ ದೃಷ್ಟಿಹೀನರು ಪಡುವ ಹಿಂಸೆಯ ಬಗ್ಗೆ ದುಃಖ ವ್ಯಕ್ತಪಡಿಸಿದ್ದರೆ, ಬದುಕಿಗಾಗಿ ಗಾಲಿಕುರ್ಚಿಯನ್ನೇ ಸಂಪೂರ್ಣ ಅವಲಂಬಿಸಿರುವ ಹೆಣ್ಣುಮಗಳು ಎಪ್ಸಿಬಾ ಡಾರತಿ, ಕಛೇರಿ, ಬ್ಯಾಂಕ್ ಮುಂತಾದ ಕಡೆಗಳಲ್ಲಿ ಏರುದಿಣ್ಣೆ (ರ್‍ಯಾಂಪ್ಸ್) ವ್ಯವಸ್ಥೆ ಇಲ್ಲದಿರುವುದರಿಂದ ಅಂಗವಿಕಲರು ಪಡುವ ಪಾಡನ್ನು ಹೇಳಿಕೊಳ್ಳುತ್ತಾರೆ. ಉದಯ ಶಂಕರ್ ಎನ್ನುವ ಅಂಗವಿಕಲ **'ಕೆಲಸ ಕೇಳಿದರೆ, ಅಪಮಾನವಷ್ಟೆ ಸಿಕ್ಕಿತು'** ಎಂದು ತಮ್ಮ ಮನದ ಅಳಲನ್ನು ಬಿಚ್ಚಿಡುತ್ತಾರೆ. ಬಾಬು ಮತ್ತು ಕೋಕಿಲಾ ಎನ್ನುವ ಇಬ್ಬರು ಅಂಗವಿಕಲರು ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸುವಾಗ ಅಂಗವಿಕಲರು ಎದುರಿಸಬೇಕಾದ ದೈಹಿಕ ಮತ್ತು ಮಾನಸಿಕ ಹಿಂಸೆಗಳನ್ನು ಪದರ ಪದರವಾಗಿ ನಮ್ಮ ಮುಂದೆ ಇಡುತ್ತಾರೆ.

ಭಾರತ ಧಾರ್ಮಿಕ ದೇಶ ಎಂದು ನಾವು ಹೇಳಿಕೊಳ್ಳುತ್ತೇವೆ. ಮೇಲಿನ ನಿದರ್ಶನಗಳು ಈ ಮಾತಿಗೆ ಪುಷ್ಟಿಯನ್ನು ನೀಡುವುದಿಲ್ಲ. **'ದಯೆಯಿಲ್ಲದ ಧರ್ಮ ಯಾವುದಯ್ಯಾ, ದಯೆಯೇ ಬೇಕು, ಸಕಲ ಪ್ರಾಣಿಗಳಲ್ಲಿ'** ಎನ್ನುವ ಬಸವಣ್ಣನವರು, ಅಂಗವಿಕಲರನ್ನು ಹೀನಾಯವಾಗಿ ಕಾಣುವ ನಮ್ಮನ್ನು ಧಾರ್ಮಿಕರೆಂದು ಪರಿಗಣಿಸುವರೇ? 'ಮಾನವನಲ್ಲಿರುವ ದೈವತ್ವದ ಪೂಜೆಯೇ ಭಗವಂತನ ನಿಜವಾದ ಪೂಜೆ' ಎಂದು ಸಾರುವ ಸ್ವಾಮಿ ವಿವೇಕಾನಂದರು ಅದನ್ನು ಬಿಟ್ಟು, ನಾವು ಆಚರಿಸುವ ಡಾಂಭಿಕ ಆಚರಣೆಗಳನ್ನು ಧರ್ಮವೆಂದು ಕರೆದಾರೇ? ಯೋಚಿಸಿ ನೋಡೋಣ. ✡




## ಗ್ರಾಮೀಣ ವಿದ್ಯಾರ್ಥಿಗಳ ವಿಜಯಸಾಧನೆ

**ಭಾ**ರತದ ಜೀವಾಳ ಅದರ ಹಳ್ಳಿಗಳಲ್ಲಿ ಇದೆ ಎಂದರು ಮಹಾತ್ಮ ಗಾಂಧಿ. ಗ್ರಾಮ ಸ್ವರಾಜ್ಯದ ಕನಸು ಕಂಡವರು ಅವರು. ಶಿಕ್ಷಣದ ಸಾರ್ವತ್ರಿಕ ಪ್ರಸಾರವೊಂದೇ ದೀನ ದಲಿತರ ಉದ್ಧಾರದ ಏಕೈಕ ಮಾರ್ಗ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಕೆಲವು ಸಂಘಸಂಸ್ಥೆಗಳ ಸ್ತುತ್ಯ ಕಾರ್ಯವನ್ನು ಬಿಟ್ಟರೆ, ಗ್ರಾಮಾಂತರ ಪ್ರದೇಶಗಳಲ್ಲಿನ ಶೈಕ್ಷಣಿಕ ವ್ಯವಸ್ಥೆಯ ಗುಣಮಟ್ಟ ಇಂದಿಗೂ ಬಹಳ ಶೋಚನೀಯವಾಗಿಯೇ ಇದೆ. ಅದರಲ್ಲೂ ಸರ್ಕಾರಿ ಶಾಲೆಗಳಂತೂ, ಅವು ನಗರ ಪ್ರದೇಶಗಳಲ್ಲಿ ಇರಲಿ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಇರಲಿ, ಅವ್ಯವಸ್ಥೆಗೆ ಹೆಸರಾದಂತವು.

ಆದರೆ ಇತ್ತೀಚಿನ ದಿನಗಳಲ್ಲಿ ಈ ಪರಿಸ್ಥಿತಿ ಬದಲಾಗುತ್ತಿರುವಂತೆ ತೋರುತ್ತಿದೆ. ಹತಾಶೆಯ ಕಾರ್ಮೋಡದ ಮಧ್ಯೆ ಆಶೆಯ ರವಿಯ ಕಿರಣಗಳು ಕಾಣಬರುತ್ತಿವೆ. ಅದಕ್ಕೆ ನಿದರ್ಶನ ಈ ವರ್ಷದ S.S.L.C ಫಲಿತಾಂಶ. ಅಂಕಿಅಂಶಗಳ ಪ್ರಕಾರ ಈ ಬಾರಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಅತ್ಯಧಿಕ ಸಂಖ್ಯೆಯಲ್ಲಿ ಯಶಸ್ಸನ್ನು ಪಡೆದಿದ್ದಾರೆ. ಅದರ ಜೊತೆಗೆ, ಹಲವಾರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶೇಕಡ ೯೦ಕ್ಕೂ ಹೆಚ್ಚು ಅಂಕಗಳನ್ನು ಪಡೆದು, ನಗರ ಪ್ರದೇಶಗಳ ಹೆಚ್ಚು ಸೌಲಭ್ಯ ಪಡೆದಿರುವ ವಿದ್ಯಾರ್ಥಿಗಳಿಗೆ ಸವಾಲು ಹಾಕಿದ್ದಾರೆ. ಇದು ಅಚ್ಚರಿಯ ವಿಷಯ ಮಾತ್ರವಲ್ಲ, ಬಹಳ ಸಂತೋಷ ತರುವ ಸಂಗತಿಯೂ ಆಗಿದೆ.

ಇಂತಹ ಕೆಲವು ವಿದ್ಯಾರ್ಥಿಗಳ ಪರಿಚಯವನ್ನು ಇತ್ತೀಚಿನ **ವಿಜಯ ಕರ್ನಾಟಕ** ಪತ್ರಿಕೆ ಮಾಡಿಕೊಟ್ಟಿದೆ. ಶೇಕಡ ೯೭ರಷ್ಟು ಅತ್ಯಧಿಕ ಅಂಕಗಳನ್ನು ಪಡೆದಿರುವ ಕೆ.ಆರ್. ಅನಿರುದ್ಧ ಪ್ರವೀಣ್ ಇರುವುದು ದಾವಣಗೆರೆ ಜಿಲ್ಲೆಯ ಬರದ ತಾಲೂಕೆಂದೇ ಹೆಸರು ಪಡೆದ ಜಗಳೂರಿನಲ್ಲೇ ಹೊರತು, ಶ್ರೀಮಂತಿಕೆಯ ಮತ್ತು ಬುದ್ಧಿವಂತಿಕೆಯ ಅಹಂಭಾವದಿಂದ ಮೆರೆಯುತ್ತಿರುವ ಬೆಂಗಳೂರಿನಲ್ಲಲ್ಲ. ಸರ್ಕಾರಿ ಶಾಲೆಯಲ್ಲಿ ಓದಿದ ಈ ಮೇಧಾವಿ ಬಾಲಕನಿಗೆ ಪ್ರೇರಣೆ ನೀಡಿದ್ದು ಮೈಸೂರಿನ ರಾಮಕೃಷ್ಣ ಆಶ್ರಮದಿಂದ ಪ್ರಕಟವಾಗಿರುವ, ಸ್ವಾಮಿ ಪುರುಷೋತ್ತಮಾನಂದರು ಬರೆದಿರುವ **ವಿದ್ಯಾರ್ಥಿಗಾಗಿ** ಎನ್ನುವ ಪುಸ್ತಕ. ಶೇಕಡ ೯೦ರಷ್ಟು ಅಂಕ ಗಳಿಸಿರುವ ಬಾಲಕ ಗೌರೀಶ ವಾಸಿಸುತ್ತಿರುವುದು ಕುಡಿಯುವ ನೀರಿಲ್ಲದ, ಓದಲು ವಿದ್ಯುತ್ ಇಲ್ಲದ, ರಸ್ತೆ ಇಲ್ಲದ, ಅಧ್ಯಯನಕ್ಕೆ ಏನೇನೂ ಅನುಕೂಲವಿಲ್ಲದ ಇಂಡಿ ತಾಲೂಕಿನ ಚಡಚಣ ಎಂಬ ಕುಗ್ರಾಮದಲ್ಲಿ. ಹೀಗೆ ಹಲವಾರು ವಿದ್ಯಾರ್ಥಿಗಳ ನಿದರ್ಶನಗಳನ್ನು ಕೊಡಬಹುದು.

**ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾ ನೋಪಕರಣೇ**-ಕಾರ್ಯದಲ್ಲಿ ಯಶಸ್ಸು ದೊರಕುವುದು ಅಂತಸ್ಸತ್ವದಿಂದಲೇ ಹೊರತು ದೊಡ್ಡ ದೊಡ್ಡ ಬಾಹ್ಯ ಉಪಕರಣಗಳಿಂದಲ್ಲ ಎನ್ನುತ್ತದೆ ಸುಭಾಷಿತವೊಂದು. ಅದಕ್ಕೆ, ಅದ್ಭುತ ಯಶಸ್ಸು ಪಡೆದ ಈ ಗ್ರಾಮೀಣ ವಿದ್ಯಾರ್ಥಿಗಳು ಜೀವಂತ ಜ್ವಲಂತ ಸಾಕ್ಷಿಯಾಗಿದ್ದಾರೆ. ಅಲ್ಲವೇ? ✡